**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**

**ಕ್ರಿಮಿನಲ್ ಪ್ರಕರಣ ಸಂಖ್ಯೆ 961/2024**

ಡಿಡಬ್ಲ್ಯೂ 01

ಹೆಸರು : ಯಮನೂರು ಹುಲಿಗೆಪ್ಪ ಗುರಿಕಾರ

ವಯಸ್ಸು : 42 ವರ್ಷ

ಉದ್ಯೋಗ : ಬಟ್ಟೆ ವ್ಯಾಪಾರ

ವಾಸಸ್ಥಳ : ಬೆಟಗೇರಿ.

ದಿನಾಂಕ : 01.12.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದಃ**

30.10.2023 ರಂದು ನಾನು ಗದಗನಿಂದ ಹಾವೇರಿಗೆ ಬರುವಾಗ ನನ್ನ ವೈಯಕ್ತಿಕ ಕೆಲಸ ನಿಮಿತ್ಯ ಕಾರಿನಲ್ಲಿ ಹೋಗುವಾಗ ಸದರಿ ಕಾರ್ ನಂಃ ಕೆಎ-26/ಬಿ-1618 ಅಂತಾ ಇರುತ್ತದೆ. ಸದರಿ ದಿನ ನನ್ನ ಚೆಕ್ ಬುಕ್, ಕಲರ್ ಆಧಾರ ಕಾರ್ಡ, ಪಾನ್ ಕಾರ್ಡ ಮತ್ತು ಎರಡು ಭಾವಚಿತ್ರ ನಜರಚೂಕಿನಿಂದ ಬಿದ್ದಿರುತ್ತದೆ. ಸದರಿ ಚೆಕ್ ನಂಃ 000311 ರಿಂದ 000335 ರವರೆಗೆ ಕೋಟೆಕ್ ಮಹಿಂದ್ರಾ ಬ್ಯಾಂಕ್, ಗದಗ ಶಾಖೆಯ ಚೆಕ್ಕುಗಳು ಇರುತ್ತವೆ. ಸದರಿ ಚೆಕ್ಕುಗಳು ಕಳೆದಿರುತ್ತವೆ. ದಿನಾಂಕಃ 02.11.2023 ರಂದು ನಾನು ನಾಗರೀಕ ದಿನ ಪತ್ರಿಕೆಯಲ್ಲಿ ಈ ಬಗ್ಗೆ ಪ್ರಕಟಣೆ ಕೊಟ್ಟಿರುತ್ತೇನೆ. ನಂತರ ಕೋಟೆಕ್ ಮಹಿಂದ್ರಾ ಬ್ಯಾಂಕ್ ಗದಗಗೆ ಹೋಗಿ ಸ್ಟಾಪ್ ಪೇಮೆಂಟ್ ಮಾಡಿಸಿರುತ್ತೇನೆ. ನಂತರ ಚೆಕ್ ಕಳೆದ ಬಗ್ಗೆ ಆನ್ ಲೈನ್ ಕಂಪ್ಲೆಂಟ್ ಮಾಡಿರುತ್ತೇನೆ. ನಂತರ 2-3 ದಿನ ಬಿಟ್ಟು ಪೋಸ್ ಮಾನ್ ಪೋನ್ ಮಾಡಿ ನೋಟೀಸ್ ಬಂದಿದೆ ತೆಗೆದುಕೊಂಡು ಹೋಗಿ ಅಂತಾ ಹೇಳಿರುತ್ತಾರೆ. 30.10.2024 ರಂದು ಪೋಸ್ಟ್ ಆಫೀಸ್ ಗೆ ಹೋಗಿ ಅಲ್ಲಿ ನೋಟೀಸ್ ಪಡೆದು ಬಂದಿರುತ್ತೇನೆ. ನಂತರ ನೋಟೀಸ್ ನೋಡಿ ದೂರುದಾರನಿಗೆ ನನ್ನ ಮೇಲೆ ಸುಳ್ಳು ಕೇಸನ್ನು ದಾಖಲು ಮಾಡಿದ್ದೀಯಾ ಅಂತಾ ಪೋನ್ ಮಾಡಿರುತ್ತೇನೆ. ನಂತರ ನಾನು ಬೆಟಗೇರಿ ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಅಲ್ಲಿ ದೂರುದಾರರನ್ನು ಪೊಲೀಸರು ಕರೆಯಿಸಿರುತ್ತಾರೆ. ಪೊಲೀಸರು ನನ್ನ ಚೆಕ್ಕನ್ನು ಕೊಡಲು ದೂರುದಾರನಿಗೆ ಹೇಳಿರುತ್ತಾರೆ. ಆರೋಪಿತನ ಚೆಕ್ ನಂಃ 000311 ರಿಂದ 000335 ರ ಚೆಕ್ಕುಗಳು ನನ್ನ ಹತ್ತಿರ ಇವೆ ಅವುಗಳನ್ನು ಎಲ್ಲಾ ಕೊಡುತ್ತೇನೆ ಅಂತಾ ಹೇಳಿರುತ್ತಾನೆ. ನಂತರ ದೂರುದಾರ ನನಗೆ ಯಾವುದೇ ಚೆಕ್ ಮರಳಿ ಕೊಡಲಿಲ್ಲ. ದೂರುದಾರ ಕೊಟ್ಟ ನೋಟೀಸ್ ಗೆ ನಾನು ಉತ್ತರ ನೀಡಿದ್ದೇನೆ. ದೂರುದಾರನಿಗೆ ನನ್ನ ಚೆಕ್ ದುರುಪಯೋಗ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ ಬಗ್ಗೆ ಕೇಸ್ ಮಾಡುತ್ತೇನೆ ಅಂತಾ ಹೇಳಿರುತ್ತೇನೆ. ಪೊಲೀಸರು ಪ್ರ ವ ವರದಿ ಮಾಡಲು ಬರುವುದಿಲ್ಲ, ಹೊರಗಡೆ ಬಗೆಹರಿಸಿಕೊಳ್ಳಿರಿ ಅಂತಾ ಹೇಳಿರುತ್ತಾರೆ. ನಾನು ದೂರುದಾರನಿಗೆ ಯಾವುದೇ ಹಣ ಕೊಡುವುದು ಬಾಕಿ ಇರುವುದಿಲ್ಲ. ನನಗೆ ಮನೆ ಅಡಚಣೆ ಇರುವುದಿಲ್ಲ. ನಾನು ಮನೆ ಕಟ್ಟುತ್ತಿರುವುದಿಲ್ಲ. ಆದ್ದರಿಂದ ನನ್ನನ್ನು ಬಿಡುಗಡೆಗೊಳಿಸಲು ಕೇಳಿಕೊಳ್ಳುತ್ತೇನೆ. ಚೆಕ್ಕಿನಲ್ಲಿಯಾ ಬರಹ ಮತ್ತು ಸಹಿ ನನ್ನದು ಇರುವುದಿಲ್ಲ. ಆದ್ದರಿಂದ ಪ್ರಕರಣ ವಜಾಗೊಳಿಸಲು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು : ಆರೋಪಿತರ ಪರಃ ಶ್ರೀ ಎಂ ಹೆಚ್ ಕೆ. ವಕೀಲರಿಂದಃ**

ನನ್ನ ಪೂರ್ತಿ ಹೆಸರು ಯಮನೂರು ಹುಲಿಗೆಪ್ಪ ಗುರಿಕಾರ ಅಂತಾ ಇರುತ್ತದೆ. ನಾನು 8 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಬಟ್ಟೆ ವ್ಯಾಪಾರ ಮಾಡುತ್ತೇನೆ ಮತ್ತು ಕುರಿ ಸಾಗಾಣಿಕೆ ಮಾಡುತ್ತೇನೆ. ನಾನು ಬ್ಯಾಡಗಿ ತಾಲೂಕಿಗೆ ಬರುವುದು ಹೋಗುವುದು ಮಾಡಿರುವುದಿಲ್ಲ. ಆದರೆ ನಾನು ಹಾವೇರಿಗೆ ಬರುವುದು ಹೋಗುವುದು ಮಾಡುತ್ತೇನೆ. ನನಗೆ ಬ್ಯಾಡಗಿ ತಾಲೂಕಿನ ಛತ್ರದಲ್ಲಿ ಲಮಾಣಿ ಎನ್ನುವವರು ಪರಿಚಯವಿದ್ದಾರೆ ಎಂದರೆ ಸರಿಯಲ್ಲ. ಸದರಿ ಲಮಾಣಿಯವರು ಬ್ಯಾಡಗಿ ಪೊಲೀಸ್ ಠಾಣೆಗೆ ಹಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಲ ಕರೆಯಿಸಿದ್ದಾರೆಂದರೆ ಸರಿಯಲ್ಲ. ನಾನು ಮತ್ತು ದೂರುದಾರ ಮೊದಲಿಂದಲೂ ಪರಿಚಯವೆಂದರೆ ಸರಿಯಲ್ಲ. ದೂರುದಾರನಿಗೆ ಹಣ ಕೊಡಬೇಕಾಗುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಚೆಕ್ ಗದಗದಿಂದ ಹಾವೇರಿಗೆ ಬರುವಾಗ ಕಳೆದಿರುತ್ತದೆ ಆದರೆ ಯಾವ ಸ್ಥಳದಲ್ಲಿ ಅಂತಾ ನಿಖರವಾಗಿ ಹೇಳಲು ಬರುವುದಿಲ್ಲ. ಗದಗದಿಂದ ಹಾವೇರಿ ಸುಮಾರು 100 ಕಿ ಮೀ ಅಂತರ ಇದೆ. ಗದಗದಿಂದ ಹಾವೇರಿಗೆ ಹುಬ್ಬಳ್ಳಿಯ ಮೇಲೆ ಮತ್ತು ಲಕ್ಷ್ಮೇಶ್ವರ ಮೇಲೆ ಎರಡು ದಾರಿ ಇರುತ್ತದೆ. ನಾನು ಚೆಕ್ ಬುಕ್ ಮತ್ತು ಇತರೇ ದಾಖಲೆಗಳನ್ನು ಕಾರಿನ ಹಿಂದಿನ ಸೀಟಿನಲ್ಲಿ ಇಟ್ಟಿರುತ್ತೇನೆ. ನಾನು ಗದಗದಿಂದ ಹಾವೇರಿಗೆ ಬರುವಾಗ ಬಾಗಿಲು ತೆಗೆದು ಹಾಕುವಾಗ ಬಿದ್ದಿರುತ್ತದೆ. ನಾನು ಲಕ್ಷ್ಮೇಶ್ವರ ದಾಟಿದ ಮೇಲೆ ನಿಂತಿದ್ದೆ ಮತ್ತು ಹಾವೇರಿಯ ಹತ್ತಿರ ಎರಡು ಬಾರಿ ನನ್ನ ಕಾರನ್ನು ನಿಲ್ಲಿಸಿರುತ್ತೇನೆ. ನನ್ನ ಚೆಕ್ ಕಳೆದಿದ್ದು 30.10.2023 ಕ್ಕೆ ಕಳೆದಿರುತ್ತದೆ. 02.11.2023 ರಂದು ದಿನ ಪತ್ರಿಕೆಯಲ್ಲಿ ಕೊಟ್ಟಿರುತ್ತೇನೆ. ಚೆಕ್ ಕಳೆದ ಬಗ್ಗೆ ಅದೇ ದಿನ ಗೊತ್ತಾಗಿರುತ್ತದೆ. ಸದರಿ ಚೆಕ್ ಕಳೆದಿದ್ದು ಹಾವೇರಿಗೆ ಬಂದ ಮೇಲೆ ಗೊತ್ತಾಗಿರುತ್ತದೆ. ನಾನು ಹಾವೇರಿಯಲ್ಲಿ ಯಾವುದೇ ದೂರನ್ನು ನೀಡಲಿಲ್ಲ. ನಾನು ಲಕ್ಷ್ಮೇಶ್ವರದಲ್ಲಿ ದೂರನ್ನು ನೀಡಲಿಲ್ಲ. ನಾನು ಮನೆಗೆ ಹೋದ ಮೇಲೆ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಲಿಲ್ಲ.

ಸದರಿ ನಾಗರೀಕ ದಿನ ಪತ್ರಿಕೆ ಗದಗ ಹಾವೇರಿಯಲ್ಲಿ ಪ್ರಕಟ ಆಗುತ್ತದೆ. ಸದರಿ ಪತ್ರಿಕೆ ಮಾನ್ಯತೆ ಪಡೆದ ಪತ್ರಿಕೆ ಅಲ್ಲಾ ಎಂದರೆ ಸರಿಯಲ್ಲ. ಸದರಿ ಪತ್ರಿಕೆ ದಿನಾಲು ಬೆಳಿಗ್ಗೆ ಪ್ರಕಟ ಆಗುತ್ತದೆ. ಸದರಿ ಪತ್ರಿಕೆಯಲ್ಲಿ ಗದಗ ಮತ್ತು ಹಾವೇರಿಯ ವಿಷಯವಿರುತ್ತದೆ. ಸದರಿ ದಿನ ಪತ್ರಿಕೆ ಹಾವೇರಿಯಲ್ಲಿ ಜಿಲ್ಲೆಯಲ್ಲಿ ಪ್ರಸಾರ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ದೂರುದಾರನಿಗೆ ಹಣ ಕೊಡುವುದು ಆಗುತ್ತದೆ ಅಂತಾ ನಮ್ಮ ಜಿಲ್ಲೆಯಲ್ಲಿ ಪ್ರಸಾರವಾಗುವ ದಿನ ಪತ್ರಿಕೆ ಹೆಸರು ಹೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದೂರುದಾರ ಚೆಕ್ ದುರುಪಯೋಗ ಪಡಿಸಿಕೊಂಡ ಬಗ್ಗೆ ಕಾನೂನು ಕ್ರಮ ಕೈಗೊಂಡಿಲ್ಲ, ಆದರೆ ಇಲ್ಲಿಯವರೆಗೆ ಚೆಕ್ ಕೊಡು ಅಂತಾ ಕೇಳುತ್ತಾ ಬಂದಿದ್ದು, ಚೆಕ್ ಕೊಟ್ಟಿರುವುದಿಲ್ಲ. ದೂರುದಾರ ಚೆಕ್ ದುರುಪಯೋಗ ಮಾಡಿಕೊಂಡ ಬಗ್ಗೆ ಇವತ್ತಿನವರೆಗೂ ಯಾವುದೇ ದೂರು ದಾಖಲಿಸಿಲ್ಲ, ಆದರೆ ಚೆಕ್ ಕೇಳುತ್ತಾ ಬಂದಿರುತ್ತೇನೆ. 30.10.2024 ರಂದು ದೂರುದಾರನ ಮೇಲೆ ಬೆಟಗೇರಿ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿ, ಆತನನ್ನು ಕರೆಯಿಸಿರುತ್ತೇನೆ. ಸದರಿ ದಿನ ಯಾವ ಪೊಲೀಸರು ಇದ್ದರು ಅಂತಾ ಹೆಸರು ಗೊತ್ತಿಲ್ಲ. ಸದರಿ ಠಾಣೆಯಲ್ಲಿ ಪಿ ಎಸ್ ಐ ಇದ್ದರು. ಸದರಿ ಪಿ ಎಸ್ ಐ ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ಠಾಣೆಯ ಹೆಸರು ಬೆಟಗೇರಿ ಪೊಲೀಸ್ ಠಾಣೆ ಅಂತಾ ಇರುತ್ತದೆ. ನಾನು ಬೆಳಿಗ್ಗೆ ಠಾಣೆಗೆ ಹೋಗಿದ್ದು, ಸಂಜೆ ದೂರುದಾರನನ್ನು ಕರೆಯಿಸಿ 2.00 ರಿಂದ 3.00 ಗಂಟೆ ಪಂಚಾಯತಿ

ಮಾಡಿರುತ್ತಾರೆ. ಸದರಿ ಪಂಚಾಯತಿ ಮುಗಿದಾಗ 6.30 ರಿಂದ 7.00 ಗಂಟೆಯಾಗಿರುತ್ತದೆ. ಸದರಿ ಠಾಣೆಯಲ್ಲಿ ಪಿ ಎಸ್ ಐ, ಎ ಎಸ್ ಐ ಮತ್ತು 3-4 ಜನ ಪಿ ಸಿ ಗಳು ಇದ್ದರು. ಸದರಿ ದಿನ ನಾನು ಒಬ್ಬನೇ ಠಾಣೆಗೆ ಹೋಗಿರುತ್ತೇನೆ. ಸದರಿ ದಿನ ದೂರುದಾರನ ಕಡೆಯಿಂದ ಏನು ಬರೆಯಿಸಿಕೊಳ್ಳಲಿಲ್ಲ ಮತ್ತು ಹಿಂಬರಹ ಕೊಡುತ್ತೇನೆ ಅಂತಾ ಹೇಳಿ ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು, ಚೆಕ್ ಬೌನ್ಸ್ ಕೇಸ್ ಇರುವುದರಿಂದ ಹೊರಗೆ ಬಗೆಹರಿಸಿಕೊಳ್ಳಿ ಅಂತಾ ಹೇಳಿರುತ್ತಾರೆ. ನಾನು ದೂರುದಾರ ಚೆಕ್ ದುರುಪಯೋಗಪಡಿಸಿಕೊಂಡಿದ್ದಾನೆ ಆತನ ಮೇಲೆ ದೂರು ತೆಗೆದುಕೊಳ್ಳಿ ಅಂತಾ ಒತ್ತಾಯ ಮಾಡಿದ್ದೇನೆ, ಆದರೆ ಹೊರಗೆ ಬಗೆಹರಿಸಿಕೊಳ್ಳಿ ಅಂತಾ ಹೇಳಿರುತ್ತಾರೆ. ನಂತರ ದೂರುದಾರ ಚೆಕ್ ಕೊಡುತ್ತೇನೆ ಅಂತಾ ಒಪ್ಪಿ ಕೊಟ್ಟಿರುವುದಿಲ್ಲ. ದೂರುದಾರನ ವಿರುದ್ಧ ಲೇಖಿ ದೂರು ಕೊಟ್ಟಿರುವುದಿಲ್ಲ. ನಾನು ಆನ್ ಲೈನ್ ದೂರನ್ನು 02.11.2023 ರಂದು ನೀಡಿರುತ್ತೇನೆ. ಪೊಲೀಸರು ದೂರನ್ನು ಸ್ವೀಕರಿಸಿಲ್ಲ ಅಂತಾ ಮೇಲಾಧಿಕಾರಿಗಳಿಗೆ ದೂರು ನೀಡಿರುವುದಿಲ್ಲ.

ಮನೆ ಅಡಚಣೆ ಸಲುವಾಗಿ ದೂರುದಾರನಿಂದ ಹಣ ಪಡೆದಿದ್ದೇನೆಂದರೆ ಸರಿಯಲ್ಲ. ಸದರಿ ಹಣ ಮರಳಿಸಲು ನಿಪಿ-1 ನ್ನು ನೀಡಿದ್ದೇನೆಂದರೆ ಸರಿಯಲ್ಲ. ನಾನು ಹಣ ಕೊಡಬೇಕಾಗುತ್ತದೆ ಅಂತಾ ನನ್ನ ಅಕೌಂಟ್ ನ್ನು ಕ್ಲೋಸ್ ಮಾಡಿ ಕಳೆದಿದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು ದೂರುದಾರ ಗೆಳೆಯರು ಎಂದರೆ ಸರಿಯಲ್ಲ. ಆರೋಪಿತನು ವಕಾಲತ್ತಿನ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-1 ರ ಮೇಲಿನ ಸಹಿಯನ್ನು ತೋರಿಸಿ ಕೇಳಲಾಗಿ, ಅದನ್ನು ತನ್ನದಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿ ಮುಂದುವರೆದು, ನಿಪಿ-1 ರ ಮೇಲಿನ ಅಕ್ಷರಗಳು ಸಹ ನನ್ನದು ಅಲ್ಲಾ ಅಂತಾ ಹೇಳಿರುತ್ತಾರೆ. ನಿಪಿ-8 ರ ಮೇಲಿನ ಸಹಿಗೂ ಮತ್ತು ನಿಪಿ-1 ರ ಮೇಲಿನ ಸಹಿಗೂ ಏನು ವ್ಯತ್ಯಾಸ ಇದೆ ಎಂದರೆ ಸಾಕ್ಷಿಯೂ ನನಗೆ ಗೊತ್ತಿಲ್ಲ, ಆದರೆ ನನ್ನ ಸಹಿ ಅಲ್ಲಾ ಎಂದು ನುಡಿದಿರುತ್ತಾರೆ. ನಿಪಿ-1 ರ ಮೇಲಿನ ಸಹಿ ನನ್ನದೇ ಅಂತಾ ಒಪ್ಪಿಕೊಂಡರೆ ಹಣ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಮ್ಮ ಮನೆ ವಿಳಾಸ ವಸಂಗಸಿಂಗ್ ಜಾಮಾದರ ನಗರ ಬೆಟಗೇರಿ ಎಂದರೆ ಸಾಕ್ಷಿಯೂ ಹುಚ್ಚನಗೌಡರ ಓಣಿ ಬೆಟಗೇರಿ ಅಂತಾ ಇರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಮೊಬೈಲ್ ಸಂಖ್ಯೆ 7624869297 ಎಂದರೆ ಸರಿ. ನನಗೆ ಇನ್ನೊಂದು ಮೊಬೈಲ್ ನಂಃ 8431507316 ಇದೆ ಎಂದರೆ ಸರಿ, ಅದು ಬಂದ್ ಇರುತ್ತದೆ. ನಾನು ಕಾನೂನು ಬದ್ಧ ಹಣ ಹಿಂದಿರುಗಿಸುವ ಸಲುವಾಗಿ ನಿಪಿ-1 ನ್ನು ನೀಡಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ದೂರುದಾರ ತನ್ನ ಬ್ಯಾಂಕಿಗೆ ನಿಪಿ-1 ನ್ನು ಸಲ್ಲಿಸಿದ್ದಾನೆಂದರೆ ಸರಿಯಲ್ಲ. ನಾನು ಖಾತೆಯನ್ನು ಕ್ಲೋಸ್ ಮಾಡಿದ್ದಕ್ಕೆ ನಗದೀಕರಣ ಆಗಿಲ್ಲ ಎಂದರೆ ಸಾಕ್ಷಿಯೂ ಪೇಮೆಂಟ್ ಸ್ಟಾಪ್ ಮಾಡಿ ಅಕೌಂಟ್ ಕ್ಲೋಸ್ ಮಾಡಿಸಿದ್ದೇನೆ. ಆದ್ದರಿಂದ ನಾನು ದೂರುದಾರನಿಗೆ ಮೋಸ ಮಾಡಿದ್ದೇನೆಂದರೆ ಸರಿಯಲ್ಲ. ನಾನು ಈ ಪ್ರಕರಣದಿಂದ ಬಿಡುಗಡೆ ಆಗಲು ಅರ್ಹ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಿಂದ ನುಣುಚಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೋಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸ ಅದೆ.

Sd/-

ಜೆಎಂಎಫ್‌ಸಿ, ಬ್ಯಾಡಗಿ.